4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.

ದಿನಾಂಕ 24.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪ್ರತಿವಾದಿಗಳ ಪರವಾಗಿ ಪಾಟೀ ಸವಾಲು ಶ್ರೀ ಬಿ ಸಿ ಕೆ ವಕೀಲರಿಂದಃ-**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಜಮೀನಿನ ಆಗುಹೋಗುಗಳ ಬಗ್ಗೆ ತಿಳಿದಿದೆ. ನನ್ನ ತಂದೆಯು ಆಲ್ ಇಂಡಿಯ ರೇಡಿಯೋ ದಲ್ಲಿ ಖಾಯಂ ನೌಕರನಾಗಿ ಕೆಲಸ ಮಾಡುತ್ತಿದ್ದರು. ಅದೇ ರೀತಿಯಾಗಿ ಸಾಗುವಳಿಯನ್ನು ಸಹ ಮಾಡುತ್ತಿದ್ದರು ಎಂದರೆ ಸರಿ . ದಾವಾಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ . ದಾವಾಸ್ತಿ ಸಂಃ 5 ನ್ನು 1 ನೇ ಪ್ರತಿವಾದಿಯು ನಮ್ಮ ತಂದೆ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ನಾನು ವಿವಾಹವಾದ ನಂತರ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿ ಉಜ್ಜನಿಪುರದಲ್ಲಿ ವಾಸವಾಗಿದ್ದೇನೆಂದರೆ ಸರಿ . 4 ನೇ ಪ್ರತಿವಾದಿಯು ವಿವಾಹವಾದ ನಂತರ ನ್ಯೂ ಕಾಲೋನಿಯಲ್ಲಿ ವಾಸವಾಗಿದ್ದಾನೆ ಎಂದರೆ ಸರಿ . ಪೇಪರ್ ಟೌನ್ ಮನೆಯಲ್ಲಿ 1 ನೇ ಪ್ರತಿವಾದಿಯ ಜೊತೆಗೆ ನನ್ನ ತಂದೆ ತಾಯಿ ವಾಸವಾಗಿದ್ದರು ಎಂದರೆ ಸರಿ . ಆತನೆ ನಮ್ಮ ತಂದೆ ತಾಯಿಯ ಆಗುಹೋಗುಗಳು ಹಾಗೂ ಖರ್ಚು ವೆಚ್ಚವನ್ನು ಭರಿಸುತ್ತಿದ್ದನು ಎಂದರೆ ಸರಿಯಲ್ಲ. ನನ್ನ ವಿವಾಹವಾದ ನಂತರ ನನ್ನ ಕುಟುಂಬದ ಆಗುಹೋಗುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ತಾಯಿಗೆ 15 ವರ್ಷಗಳಿಂದ ಬಿಪಿ , ಸೂಗರ್ , ಅಸ್ತಮ ಮತ್ತು ಕ್ಷಯ ರೋಗ ಇತ್ತು ಎಂದರೆ ಸರಿ . ನನ್ನ ತಂದೆಯು 2019 ಹಾಗೂ ನನ್ನ ತಾಯಿಯು 2023 ರಲ್ಲಿ ಮೃತಪಟ್ಟರುತ್ತಾರೆ. ನನ್ನ ತಂದೆಯ ಮರಣ ನಂತರ ನನ್ನ ತಾಯಿಯು 1 ನೇ ಪ್ರತಿವಾದಿಯ ಮನೆಯಲ್ಲಿ ವಾಸವಾಗಿದ್ದಳು ಎಂದರೆ ಸರಿಯಲ್ಲ. ನನ್ನ ತಾಯಿಯು ನಮ್ಮ ಜೊತೆಯಲ್ಲಿ 2015 ರಿಂದ 2018 ರವರೆಗೆ ವಾಸವಾಗಿದ್ದರು. ಆ ಸಮಯದಲ್ಲಿ ನನ್ನ ತಂದೆಯು ಜೀವಂತವಾಗಿದ್ದರು. ನನ್ನ ತಂದೆಯ ಜೀವಿತಾವಧಿಯಲ್ಲಿ ಆತನ ಖರ್ಚು ವೆಚ್ಚಗಳನ್ನು ಆತನೆ ನೋಡಿಕೊಳ್ಳುತ್ತಿದ್ದನು. ಎಂದಿಗೂ ನನ್ನ ತಾಯಿಯು ನನ್ನೊಟ್ಟಿಗೆ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ.

4. ನಾನು ನನ್ನ ತಂದೆ ಮರಣ ನಂತರ ಉಜ್ಜನಿಪುರದಲ್ಲಿರುವ ಮನೆಯ ಕುರಿತಾಗಿ ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಉಜ್ಜನಿಪುರದಲ್ಲಿ 60*20 ಅಡಿ ವಿಸ್ತೀರ್ಣದ ಜಾಗವು ನನ್ನ ತಾಯಿಗೆ ಮಂಜೂರಾಗಿರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಪ್ರಸ್ತುತ ಸದರಿ ಮಂಜೂರಾತಿ ಆದೇಶ ರದ್ದಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಈ ಕುರಿತಾಗಿ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾಯಿಯು ಮಾನ್ಯ ಭದ್ರಾವತಿಯ 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ನ್ಯಾಯಾಲಯದಲ್ಲಿ ಅ ದಾ ಸಂಃ 2/23 ರ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದರು. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆಕೆಯ ಪರವಾಗಿ ಆದೇಶವಾಗಿರುತ್ತದೆ ಎಂದರೆ ಸರಿ . ನನ್ನ ತಾಯಿ ಮರಣ ನಂತರ ನಾನು ಈ ದಾವೆಯ 1 ನೇ ಪ್ರತಿವಾದಿ ಮೂಲಕ ಜ್ಞಾಪನೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಸದರಿ ದಾವೆಯನ್ನು ವಜಾಗೊಳಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸತ್ಯಾಂಶ ತಿಳಿದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

5. ನನ್ನ ತಾಯಿಯು ಆಕೆ ಹೆಸರಿಗೆ ಮಂಜೂರಾದ ಸ್ವತ್ತನ್ನು 1 ನೇ ಪ್ರತಿವಾದಿ ಹೆಸರಿಗೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಭದ್ರಾವತಿಯ 3 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ನ್ಯಾಯಾಲಯದಲ್ಲಿ ಅ ದಾ ಸಂಃ 389/24 ರ ದಾವೆಯನ್ನು ಸ್ವಾಧೀನತೆ , ಘೋಷಣತ್ಮಾಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದರು. ದಾವೆಯು ಇತ್ಯರ್ಥಾಕಾಗಿ ಬಾಕಿ ಇದೆ. ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತನ್ನು 1 ನೇ ಪ್ರತಿವಾದಿ ಹೆಸರಿಗೆ ಮರಣ ಶಾಸನ ಬರೆದಿರುತ್ತಾರೆ ಎಂದರೆ ಸರಿ

ಯಲ್ಲ. ಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. ನನ್ನ ತಂದೆಯ ಜೀವಿತಾವಧಿಯಲ್ಲಿ ಸ ನಂಃ 40/1 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ನನ್ನ , 1 ಮತ್ತು 4 ನೇ ಪ್ರತಿವಾದಿಗಳ ಪರವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಸದರಿ ಜಮೀನನ್ನು ನಾವುಗಳು ದಿಃ 27.03.2001 ರಂದು 4 ನೇ ಪ್ರತಿವಾದಿ ಹೆಸರಿಗೆ ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ . ಸದರಿ ಪತ್ರದ ಆಧಾರದ ಮೇಲೆ ಮುಟೇಷನ್ 4 ನೇ ಪ್ರತಿವಾದಿ ಹೆಸರಿಗೆ ಬಂದಿರುತ್ತದೆ ಎಂದು ಸಾಕ್ಷಿಯ ದಾಖಲೆಯನ್ನು ನೋಡಿ ಒಪ್ಪಿಕೊಂಡ ಕಾರಣ ಅಭಿಮುಖವಾಗಿ ನಿಡಿ–1 ಎಂದು ಗುರುತಿಸಲಾಯಿತು. ಪಹಣಿ ಪತ್ರಿಕೆಯು 4 ನೇ ಪ್ರತಿವಾದಿ ಹೆಸರಿಗೆ ಇದೆ ಎಂದರೆ ಸರಿ . ಸಾಕ್ಷಿ ಪಹಣಿ ಪತ್ರಿಕೆಯನ್ನು ನೋಡಿ ಒಪ್ಪಿಕೊಂಡ ಕಾರಣ ಅಭಿಮುಖವಾಗಿ ನಿಡಿ–2 ಎಂದು ಗುರುತಿಸಲಾಯಿತು. ಹಕ್ಕು ಖುಲಾಸೆ ಪತ್ರದ ಪ್ರಕಾರ 4 ನೇ ಪ್ರತಿವಾದಿಯ ಹೆಸರಿಗೆ ಸ್ವತ್ತನ್ನು ನೀಡಿದ್ದು ಉಳಿದ ನಾನು ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ಯಾವುದೇ ಸ್ವತ್ತು ವರ್ಗಾವಣೆ ಆಗಿರುವುದಿಲ್ಲ. 80 ಸಾವಿರ ರೂ.ಗಳನ್ನು ಸ್ವೀಕರಿಸಿ 4 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ . ಸಾಕ್ಷಿ ಹಕ್ಕು ಖುಲಾಸೆ ಪತ್ರವನ್ನು ನೋಡಿ ಒಪ್ಪಿಕೊಂಡ ಕಾರಣ ಅಭಿಮುಖವಾಗಿ ನಿಡಿ–3 ಎಂದು ಗುರುತಿಸಲಾಯಿತು.

7. ನನಗೆ 1979 ರಲ್ಲಿ 9 ವರ್ಷ ವಯಸ್ಸಾಗಿತ್ತು. ನನ್ನ ತಂದೆಯು ನನ್ನ ದೊಡ್ಡಪ್ಪನಿಂದ 4 ಗುಂಟೆ ಜಮೀನನ್ನು ನನ್ನ ಹೆಸರಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕ್ರಯ ಪತ್ರವನ್ನು ತೋರಿಸಲಾಗಿ ತನ್ನದೆ ಎಂದು ನೋಡಿ ಒಪ್ಪಿಕೊಂಡ ಕಾರಣ ಅಭಿಮುಖವಾಗಿ ನಿಡಿ–4 ಎಂದು ಗುರುತಿಸಲಾಯಿತು. ನಿಡಿ–4 ರಲ್ಲಿ ನಮುದಾಗಿರುವ ಸ್ವತ್ತು ನನ್ನ ಸ್ವಾಧೀನದಲ್ಲಿಯೇ ಇದೆ. ಸ ನಂಃ 39 ರಲ್ಲಿ 1 ಎಕರೆ 9 ಗುಂಟೆ ಜಮೀನು ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನನ್ನ ಹೆಸರಿಗೆ ಮಂಜೂರಾತಿಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಸ್ವತ್ತಿನ ಪಹಣಿ ಪತ್ರಿಕೆ ಮತ್ತು ಮುಟೇಷನ್ ಪ್ರತಿ ತೋರಿಸಲಾಗಿ ಸಾಕ್ಷಿಯು ನೋಡಿ ಒಪ್ಪಿಕೊಂಡ ಕಾರಣ ಅಭಿಮುಖವಾಗಿ ನಿಡಿ–5 ಮತ್ತು 6 ಎಂದು ಗುರುತಿಸಲಾಯಿತು.

8. ದಾವಾಸ್ತಿ ಸಂಃ 4 ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ . ನನ್ನ ತಂದೆಯ ಜೀವಿತಾವಧಿಯಲ್ಲಿ ನನ್ನ ತಾಯಿ ಹೆಸರಿಗೆ ಖಾತೆ ಬದಲಾವಣೆ ಮಾಡಲು ಅರ್ಜಿಯನ್ನು ನೀಡಿ ಅದರ ಆಧಾರದ ಮೇಲೆ ಸದರಿ ಸ್ವತ್ತಿನ ಖಾತೆಯು ನನ್ನ ತಾಯಿ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಿ ಮುಂದೂಡಲಾಯಿತು).

(ತೆ.ನ್ಯಾ.ಸಾ.ಹೇ.ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಗಿರಿಜಾ ಎನ್)

4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,

ಮತ್ತು ಜೆಎಂಎಫ್‌ಸಿ, ಭದ್ರಾವತಿ.